ಎಲ್ಲರಿಗೂ ಅದನ್ನು ಹೇಳಿದಳು. ಅದು ಜಾಗ ಮಾಡಿಕೊಂಡಿರುವುದರಿಂದ ಇವತ್ತು ಕೂಡ ಬರುವ ಸಾಧ್ಯತೆ ಇದೆ, ಮೊದಲು ಕಿಟಕಿಗೆ ಭದ್ರವಾಗಿ ಮೆಶ್ ಹಾಕಿಸಬೇಕು ಮತ್ತು ಬಚ್ಚಲುಮನೆ ಬಾಗಿಲು ರಿಪೇರಿ ಮಾಡಿಸಬೇಕು ಎಂದುಕೊಂಡು ಎಲ್ಲರೂ ತಂತಮ್ಮ ಕೆಲಸಗಳಲ್ಲಿ ಮುಳುಗಿದರು.

ಎರಡು ವರ್ಷದ ಹಿಂದೆ ಹೀಗೇ ಹೆಗ್ಗಣಗಳು ಮನೆಯ ತಳಮಟ್ಟದ ಪಾಯದ ಕಾಂಪೌಂಡ್ ಗೋಡೆಯಲ್ಲಿ ತೂತು ಕೊರೆದು ಅದನ್ನು ಮುಚ್ಚಿಸಲು ಕೆಲಸದವರಿಗಾಗಿ ಆರು ತಿಂಗಳವರೆಗೂ ಕಾದು ಅದನ್ನು ಮುಚ್ಚಿಸಿದ್ದು, ಸಣ್ಣ ಇಲಿಯೊಂದು ಡ್ಯೂಪ್ಲೆಕ್ಸ್ ಮೆಟ್ಟಿಲ ಕೆಳಗೆ ಸೇರಿಕೊಂಡು ಅದನ್ನು ಮುಂಬಾಗಿಲಿನಿಂದ ಓಡಿಸಿದ ನೆನಪಾಗಿ ಇದೆಲ್ಲಿನ ರಾಮಾಯಣವಪ್ಪ, ಈ ಇಲಿ, ಹೆಗ್ಗಣಗಳು ನಮ್ಮ ಪ್ರಾಣ ತಿನ್ನುವುದಕ್ಕೆ ಹುಟ್ಟಿವೆ ಎಂದು ಬೈದುಕೊಂಡಳು ಶ್ರೀಮತಿ.

ತಾನು ಹುಟ್ಟಿ ಬೆಳೆದ ತನ್ನೂರಿನ ದೊಡ್ಡ ಮನೆಯ ಉಗ್ರಾಣದಲ್ಲಿ ತುಂಬಿರುತ್ತಿದ್ದ ಮೂಟೆಗಟ್ಟಲೆ ಭತ್ತ, ಕಡಲೆಕಾಯಿ, ರಾಗಿ, ಜೋಳದಂತಹ ರಾಶಿ ರಾಶಿ ಬೆಳೆಗಳನ್ನು ತಿನ್ನಲು ಹಗಲು ರಾತ್ರಿಯೆಂಬ ಪರಿವೆಯಿಲ್ಲದೆ ಓಡಾಡುತ್ತಿದ್ದ ಇಲಿಗಳನ್ನು ನೋಡಿ ಇಷ್ಟು ಹೆದರಿಕೆ ಆಗುತ್ತಿರಲಿಲ್ಲವಲ್ಲ, ಈಗ ಅದೇಕೆ ಇಷ್ಟೊಂದು ಆತಂಕ ಎಂದು ಶ್ರೀಮತಿ ತನ್ನಲ್ಲೇ ಪ್ರಶ್ನಿಸಿಕೊಂಡಳು. ಇಲಿಗಳು ತುಂಬಾ ಎನಿಸಿದಾಗ ಬೋನಿನಲ್ಲಿ ಭಟ್ಟರ ಅಂಗಡಿಯ ಬೋಂಡದ ಔತಣಕ್ಕೆ ಆಹ್ವಾನಿಸಿ ಅವು ಸೆರೆಸಿಕ್ಕ ನಂತರ ಮನೆಯ ಹಿರಿಯರು ಯಾರಾದರೂ ಅದನ್ನು ಎಲ್ಲಾದರೂ ನೀರಿನಲ್ಲಿ ಬಿಟ್ಟು ಬರುತ್ತಿದ್ದುದು ಅವಳಿಗೆ ನೆನಪಾಯಿತು.

ಮರುದಿನ ಬೆಳಗ್ಗೆ ಅದೇ ಸಮಯಕ್ಕೆ ಶಿಸ್ತಾಗಿ ಹಾಜರಾದ ಇಲಿಯನ್ನು ಓಡಿಸುವ ಅಪ್ಪ–ಮಗನ ಪ್ರಯತ್ನದಲ್ಲಿ ಅದು ಅಡುಗೆಮನೆ, ಸ್ಟೋರ್ ರೂಮ್, ದೇವರಮನೆ ಮತ್ತು ರೂಮಿನೊಳಗೂ ಪ್ರವೇಶ ಮಾಡಿ ನಿಗೂಢವಾಗಿ ಕಣ್ಮರೆಯಾಯಿತು. ಅದು ಸೇರಿಕೊಂಡಿರಬಹುದಾದ ಸಂಶಯಾಸ್ಪದ ಜಾಗಗಳಲ್ಲಿದ್ದ ವಸ್ತುಗಳೆಲ್ಲ ಚೆಲ್ಲಾಪಿಲ್ಲಿಯಾಗಿ ಬಿದ್ದಿದ್ದುದನ್ನು ನೋಡಿದ ಶ್ರೀಮತಿ, 'ಏನು, ಅದು ಒಳಗೂ ಬಂದುಬಿಟ್ಟಿತಾ? ಅಯ್ಯೋ ಇನ್ನು ಅದನ್ನು ಹಿಡಿಯುವುದು ಬಹಳ ಕಷ್ಟ' ಎಂದು ಪೇಚಾಡತೊಡಗಿದಳು. ಇದೇನು ಪಾಕಿಸ್ತಾನದ ಇಲಿಯಾ! ನುಸುಳುಕೋರರಂತೆ ಹೇಗೆ ಹೊರಗಿನ ಮೆಶ್‌ನಿಂದ ನುಸುಳಿ ಬಾಗಿಲು ಕೊರೆದುಕೊಂಡು ಹೀಗೆ ಒಳಗೆ ಪ್ರವೇಶಿಸುತ್ತಿದೆ ಎಂದು ಶ್ರೀಮತಿ ತನ್ನ ಗುಮಾನಿ ಹೊರಹಾಕಿದಳು.

ಶಾಮರಾಯರು, 'ಅದು ರೋಗದ ಇಲಿ ಇರಬಹುದು. ಒಂಥರಾ ಬಿಳಿಚಿಕೊಂಡಿತ್ತು' ಎಂದು ತಮ್ಮ ಅಭಿಪ್ರಾಯ ಮಂಡಿಸಿದರು. 'ಅದು ರೂಮಿಗೆ ಬರಲೇ ಇಲ್ಲ. ನಾನು ಅಲ್ಲೇ ಬಾಗಿಲಲ್ಲಿ ಅಡ್ಡ ನಿಂತಿದ್ದೆ' ಎಂದು ಶಾಮರಾಯರ ಮಡದಿ ವನಜಮ್ಮ ನಿಖರವಾಗಿ ಹೇಳಿದರು.

ಹಾಗಾದರೆ ಅದು ಎಲ್ಲಿ ಹೋಯಿತು? ನಾವೆಲ್ಲ ಇಲ್ಲೇ ಇದ್ದೆವಲ್ಲ. ಅದು ಮನೆಯಲ್ಲಿ ಇದೆಯಾ ಅಥವಾ ಹೊರಗೆ ಹೋಯಿತಾ? ಎಂದು ಎಲ್ಲರೂ ತಲೆ ಮೇಲೆ ಕೈಹೊತ್ತು ಕುಳಿತರು.

'ಅದು ನಾಟಿ ಇಲಿ ಇರಬೇಕು' ಎಂದು ಶ್ರೀಮತಿ ಹೇಳಿದಳು. ಆಗ ರಮಾನಾಥ, 'ಹೌದೌದು, ನೀನು ದೊಡ್ಡ ಸ್ಕಾಲರ್ ನೋಡು... ದೊಡ್ಡದಾಗಿ ಬಂದುಬಿಟ್ಟಳು ಅದು ನಾಟಿ ಇಲಿ ಅಂತ ಸರ್ಟಿಫಿಕೆಟ್ ಕೊಡಕ್ಕೆ!' ಎಂದು ವ್ಯಂಗ್ಯವಾಡಿದ. ಅದಕ್ಕೆ ಶ್ರೀಮತಿ 'ಹೂಂ... ಹೌದು ರೀ, ಲಾಸ್ಟ್ ಟೈಂ ಹೆಗ್ಗಣಗಳು ಕೊರೆದಿದ್ದ ಕಾಂಪೌಂಡ್ ತಳ ಮುಚ್ಚಿಸಿದ್ದೆವು ನಿಮಗೆ ನೆನಪಿದೆಯಾ, ಬಾರಿ ಹೈಬ್ರೀಡ್ ಸೈಜಿನವು! ಸಾಧಾರಣ ಮೈಕಟ್ಟಿನ ನಮ್ಮ ಹಸುಗಳನ್ನು ನಾಟಿ ಹಸು ಅಂತ, ದಷ್ಟಪುಷ್ಟವಾಗಿ ಉಬ್ಬಿಕೊಂಡಿರುವ ಹಸುಗಳನ್ನು ಸೀಮೆಹಸು ಅಂತ ಹೇಳ್ತಾರೋ ಇಲ್ಲವೋ! ಅದಕ್ಕೇ ಈಗ ನಮ್ಮ ಮನೆಗೆ ಬಂದಿರುವುದು ನಾಟಿ ಇಲಿ, ಲಾಸ್ಟ್ ಟೈಂ ಬಂದಿದ್ದ ಹೆಗ್ಗಣ ಹೈಬ್ರೀಡ್' ಎಂದು ತನ್ನ ಜ್ಞಾನ ಪ್ರದರ್ಶಿಸಿದಳು ಶ್ರೀಮತಿ. 'ಹಾಗಿದ್ದರೆ ಒಂದು ಕೆಲಸ ಮಾಡು, ಇಲಿಗಳ ಮೇಲೆ ಒಂದು ಪಿಎಚ್.ಡಿ. ಮಾಡು. ಆವಾಗ ನಿನಗೆ ಡಾಕ್ಟರೇಟು ಸಿಕ್ಕು, ಇಲಿಗಳ ಡಾ. ಶ್ರೀಮತಿ ಎಂದು ಪ್ರಸಿದ್ಧಳಾಗುತ್ತೀಯ' ಎಂದು ರೇಗಿಸಿದ ರಮಾನಾಥ.

'ರೀ, ಹಾಗಾದರೆ ಗಣೇಶನಿಗೆ ಇಲಿ ಹೇಗೆ ವಾಹನವಾಯಿತು ನಿಮಗೆ ಗೊತ್ತಾ? ಥಟ್ಟಂತ ಹೇಳಿ ನೋಡೋಣ' ಎಂದು ರಮಾನಾಥನಿಗೆ ಸವಾಲೆಸೆದಳು. ತಾನು ತಬ್ಬಿಬ್ಬಾದರೂ ತೋರ್ಪಡಿಸಿಕೊಳ್ಳದ ರಮಾನಾಥ 'ನೀನೇ ಹೇಳು ಮಾರಾಯ್ತಿ, ನನ್ನಂಥ ಬಡಪಾಯಿಗೇನು ಗೊತ್ತಾಗತ್ತೆ' ಎಂದು ಲಲ್ಲೆಗೆರೆದ.

'ಪುರಾಣಗಳಲ್ಲಿ ಮೂಷಿಕನು ಗಣೇಶನ ವಾಹನವಾದ ಕುರಿತು ಹಲವಾರು ಕಥೆಗಳಿವೆ. ಅಸುರರ ರಾಜ ಗಜಮುಖನು ಶಿವನನ್ನು ಕುರಿತು ತಪಸ್ಸು ಮಾಡಿ ವರ ಪಡೆಯುತ್ತಾನೆ. ತನಗೆ ಸಿಕ್ಕ ವರದಿಂದ ಭೂಲೋಕ, ಪಾತಾಳ ಲೋಕಗಳಲ್ಲಿ ಆಧಿಪತ್ಯ ಸ್ಥಾಪಿಸಿ ಕೊನೆಗೆ ದೇವಲೋಕಕ್ಕೂ ದಾಳಿಯಿಟ್ಟು, ಇಂದ್ರಾದಿ ದೇವತೆಗಳನ್ನು ಸೋಲಿಸಿ, ನಾನೇ ಮೂರು

